# ಮಧುಮೇಹಿಗಳ ಗಾಯ ಗುಣವಾಗಿಸಲು
# ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ



**ಮಧುಮೇಹಿಗಳಲ್ಲಿ ಸಾಧಾರಣ ಮತ್ತು ತೀವ್ರ ಸ್ವರೂಪದ ಗಾಯಗಳಾದರೆ ಅದು ಬೇಗನೆ ಗುಣವಾಗುವುದಿಲ್ಲ. ದೇಹದಲ್ಲಿ ಸಕ್ಕರೆಯ ಪ್ರಮಾಣ ಏರುಪೇರು ಆಗುವುದರಿಂದ ಗಾಯ ಗುಣವಾಗಲು ಚಿಕಿತ್ಸೆ ನೀಡಿದರೂ ಅದು ಅಧಿಕ ಸಮಯ ತೆಗೆದುಕೊಳ್ಳುತ್ತದೆ. ಇಂಥ ಗಾಯಗಳಿಗೆ ಸೋಂಕು ತಗುಲದೆ ಗುಣಪಡಿಸಲು ಇದೀಗ ಹೈಪರ್‌ಬೇರಿಕ್ ಆಕ್ಸಿಜನ್ ಥೆರಪಿ ಎಂಬ ಅತ್ಯಾಧುನಿಕ ಚಿಕಿತ್ಸೆ ಬಂದಿದೆ.**

■ **ಉಮಾ ವೇಣೂರು**

ಬದಲಾದ ಜೀವನಶೈಲಿ, ವೇಗದ ಬದುಕು, ಸಮಯದ ನಿರ್ವಹಣೆಯ ಕೊರತೆ, ವ್ಯಾಯಮ, ನಡಿಗೆಯ ಕಡೆಗೆ ಗಮನಕೊಡಲೂ ಆಗದಷ್ಟು ಕೆಲಸದ ಒತ್ತಡ... ಇವೇ ಮುಂತಾದ ಕಾರಣಗಳಿಂದಾಗಿ ಇಂದು ನಮ್ಮ ಆರೋಗ್ಯ ಹದಗೆಡುತ್ತಿದೆ. ಜೀವನಶೈಲಿ ಕಾಯಿಲೆಗಳಾದ ಮಧುಮೇಹ, ಅಧಿಕ ರಕ್ತದೊತ್ತಡ, ಹೃದಯ ಸಂಬಂಧಿ, ಉಸಿರಾಟದ ಸಮಸ್ಯೆ ಹಾಗೂ ಕ್ಯಾನ್ಸರ್‌ನಂತಹ ಕಾಯಿಲೆಗಳು ಚಿಕ್ಕವಯಸ್ಸಿನಲ್ಲೇ ಆವರಿಸಿಕೊಂಡುಬಿಡುತ್ತಿವೆ. ಇದರಿಂದಾಗಿ ಉಂಟಾಗುವ ದೈಹಿಕ ಗಾಯಗಳನ್ನು ಎದುರಿಸುವುದು ಹಾಗೂ ಬೇಗನೆ ಗುಣಪಡಿಸುವುದು ಇಂದಿನ ದಿನಗಳಲ್ಲಿ ಆರೋಗ್ಯ ಸವಾಲಾಗಿ ಪರಿಣಮಿಸುತ್ತಿವೆ.

ಮಧುಮೇಹ ಒಂದು ರೀತಿಯಲ್ಲಿ 'ಸ್ಲೋ ಪಾಯಿಸನ್' ಇದ್ದ ಹಾಗೆ. ದೇಹದ ಒಳಭಾಗವನ್ನು, ಅಂಗಾಂಗಗಳನ್ನು ಇಂಚು ಇಂಚಾಗಿ ವಿನಾಶದತ್ತ ಒಯ್ಯುವ ಈ ಕಾಯಿಲೆ ಇಂದಿನ ದಿನಗಳಲ್ಲಿ ಅತಿ ಹೆಚ್ಚು ಜನರನ್ನು ತನ್ನ ತೆಕ್ಕೆಗೆ ಎಳೆದುಕೊಳ್ಳುತ್ತಿದೆ. ಮಧುಮೇಹ ಇದ್ದವರಿಗೆ ಗಾಯಗಳಾದರೆ ಅದು ಗುಣವಾಗುವುದು ನಿಧಾನ ಮತ್ತು ಸುಲಭವಾಗಿ ಗುಣವಾಗುವುದೂ ಇಲ್ಲ. ಕಾಲಿಗೆ, ಕೈಗೆ ಗಾಯಗಳಾದರೆ ಅದು ಬೇಗ ಮಾಯುವುದಿಲ್ಲ. ಈ ಗಾಯಗಳಲ್ಲಿ ಎರಡು ವಿಧ. ಸಾಮಾನ್ಯ (ಅಕ್ಯೂಟ್) ಗಾಯ ಹಾಗೂ ಗಂಭೀರ (ಕ್ರೋನಿಕ್) ಗಾಯ.

ಸಾಮಾನ್ಯ ಗಾಯ ಎಡವಿ ಬಿದ್ದಾಗ, ಉಗುರು ಕತ್ತರಿಸುವಾಗ ಆಗುವ ಗಾಯ, ಸುಟ್ಟ ಗಾಯಗಳು, ಕತ್ತರಿ, ಚಾಕು ಮುಂತಾದ ದಿನಬಳಕೆಯ ವಸ್ತುಗಳಿಂದಾಗುವ ಅಚಾನಕ್ ಗಾಯಗಳು. ಇಂತಹ ಸಾಮಾನ್ಯ ಗಾಯಗಳಿಗೆ ಚಿಕಿತ್ಸೆ ಸುಲಭ. ಗುಳಿಗೆಗಳು, ಲೇಪಗಳು, ಮುಲಾಮುಗಳಿಂದಲೂ ಸೋಂಕು ತಗುಲದ ರೀತಿಯಲ್ಲಿ ಚಿಕಿತ್ಸೆ ನೀಡಬಹುದು.
ಆದರೆ ಗಂಭೀರ ಸ್ವರೂಪದ ದೈಹಿಕ ಗಾಯಗಳಿಗೆ ಚಿಕಿತ್ಸೆ ನೀಡಿದರೂ ಗುಣವಾಗುವ ಸಮಯ ಅಧಿಕ.

ಸರ್ಜರಿ ಆದಾಗ ಕೆಲವಾರು ಇಂಚುಗಳಷ್ಟು ಸೀಳಬೇಕಾಗುತ್ತದೆ. ಹಲವು ಪದರಗಳಲ್ಲಿ ಚರ್ಮವನ್ನು ಸೀಳಿ ಶಸ್ತ್ರಚಿಕಿತ್ಸೆ ಮಾಡಬೇಕಾಗುತ್ತದೆ. ಸೂಕ್ತವಾದ ಆ್ಯಂಟಿ ಬಯಾಟಿಕ್, ಇಂಜೆಕ್ಷನ್, ಔಷಧಿಗಳನ್ನು ನೀಡಿದರೂ ದೇಹದಲ್ಲಿನ ರಕ್ತದಲ್ಲಿ ಸಕ್ಕರೆಯ ಅಂಶದ ಏರುಪೇರಿನಿಂದಾಗಿ ಇಂತಹ ಗಾಯಗಳು ಬೇಗನೆ ಗುಣವಾಗುವುದಿಲ್ಲ. ಮುಖ್ಯವಾಗಿ ಕ್ಯಾನ್ಸರ್‌ಗೆ ಮಾಡುವ ಸರ್ಜರಿಯಲ್ಲಿ ಗಾಯ ಮಾಯುವುದೇ

